



ಈಶ್ವರ

## ಪ್ರೀತಿಯ ಹಾರ್ಮೋನ್!



ಡಾ. ವೆಂಕಟೇಶ್ ಬಾಬು
ಮನೋವೈದ್ಯರು, ಫೋರ್ಟಿಸ್ ಆಸ್ಪತ್ರೆ

'ಪ್ರೀತಿ' ಎನ್ನುವುದು ಒಂದು ಭಾವನೆ ಮಾತ್ರವಲ್ಲ, ಮನುಷ್ಯನ ಜೀವನದಲ್ಲಿ ಅದೊಂದು ಮಹತ್ವಪೂರ್ಣ ಬೆಸುಗೆ. ನಾವಂದುಕೊಂಡಂತೆ ಇದು ಹೃದಯದ ಮಾತಷ್ಟೇ ಅಲ್ಲ. ಅದರ ಜೊತೆಗೆ ಮಿದುಳು, ದೇಹ, ಬುದ್ಧಿಗಳೆಲ್ಲವೂ ತಂತಮ್ಮ ಕಾರ್ಯಗಳನ್ನು ನೆರವೇರಿಸುತ್ತವೆ. ಎರಡು ದೇಹಗಳಲ್ಲಿ ಉತ್ಪತ್ತಿಯಾಗುವ ಒಂದು ಹಾರ್ಮೋನ್ ಎರಡು ವ್ಯಕ್ತಿಗಳ ನಡುವಿನ ನಂಟಿಗೆ ಪ್ರೇಮದ ಭಾಷ್ಯೆ ಬರೆಯುತ್ತದೆ. ಅದುವೇ ಆಕ್ಸಿಟೊಸಿನ್ (oxytocin) ಎನ್ನುವ ಶಕ್ತಿಶಾಲಿ ಹಾರ್ಮೋನ್. ಇದನ್ನು 'ಪ್ರೀತಿಯ ಹಾರ್ಮೋನ್' ಎಂದೂ ಕರೆಯಲಾಗುತ್ತದೆ. ಇದು ಸಾಮಾಜಿಕ ಸಂವಹನ ಮತ್ತು ಲೈಂಗಿಕ ಭಾವೋದ್ವೇಗಕ್ಕೆ ಕಾರಣವಾಗುತ್ತದೆ. ಪ್ರೀತಿಪಾತ್ರರನ್ನು ಅಪ್ಪಿಕೊಂಡಾಗ, ಮುದ್ದಿಸಿದಾಗ ಈ ಹಾರ್ಮೋನ್ ಉತ್ಪತ್ತಿಯಾಗುತ್ತದೆ. ಸಂಗಾತಿಗಳು ಮೋಹಿಸುವಾಗಲೂ, ತಾಯಿ ಹಾಲುಣಿಸುವಾಗಲೂ ಇದೇ ಹಾರ್ಮೋನ್ ಬಿಡುಗಡೆಯಾಗುತ್ತದೆ. ಹಾಗೆಯೇ ಎಂದೂ ಕಂಡರಿಯದ ವ್ಯಕ್ತಿಯೊಂದಿಗಿನ ಆನ್‌ಲೈನ್ ಮಾತು–ಸಂಭಾಷಣೆಯಲ್ಲಿಯೂ ಈ ಹಾರ್ಮೋನ್ ಉತ್ಪತ್ತಿಯಾಗುತ್ತದೆ. ಫೇಸ್‌ಬುಕ್ ಪ್ರೀತಿ ಹುಟ್ಟುವುದು ಹೀಗೆಯೇ.

ಒಬ್ಬರು ತೋರಿದ ರೂಪ, ಭಾವ, ಪ್ರೀತಿ, ಕಾಳಜಿ, ಅನುರಾಗಗಳು ನಿಜವೆಂದು ಇನ್ನೊಬ್ಬ ವ್ಯಕ್ತಿ ಸಂಪೂರ್ಣವಾಗಿ ನಂಬಿ ಅದರ ಸುತ್ತ ತನ್ನದೇ ಆದ ಕಾಲ್ಪನಿಕ ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತಾನೆ. ಅದುವೇ ಪ್ರೇಮವಾಗಿ ಪಾರ್ಪಡುತ್ತದೆ. ಇದೊಂದು ಕಾಲ್ಪನಿಕ ಅನುಬಂಧ. ವಾಸ್ತವದಲ್ಲಿ ಅದು ನಿಜವೂ ಆಗಬಹುದು, ಸುಳ್ಳೂ ಆಗಬಹುದು, ಅರ್ಧ ಸತ್ಯವೂ ಆಗಬಹುದು.

ಮಾತು, ಜೋಕು ಇಬ್ಬರನ್ನೂ ಹತ್ತಿರಕ್ಕೆಳೆಯುತ್ತದೆ. ಸಣ್ಣ ಮುನಿಸು, ಸಿಲ್ಲಿ ಜಗಳಗಳು, ಚಿಕ್ಕಪುಟ್ಟ ಅಭಿಪ್ರಾಯಭೇದಗಳ ನಡುವೆಯೇ ಗಟ್ಟಿಗೊಳ್ಳುವ ಅನುಬಂಧ ಎರಡೂ ಹೃದಯಗಳಲ್ಲಿ ಒಲವಿನ ಬೇರುಗಳನ್ನು ಬೆಳೆಸುತ್ತದೆ. ಜಾತಿ–ಕುಲ–ಗೋತ್ರ, ಊರು–ಕೇರಿ, ಆಚಾರ–ವಿಚಾರ–ಭಾಷೆಗಳ ಎಲ್ಲಾ ಅಂತರವನ್ನೂ ದೂರ ಸರಿಸಿ ಎಲ್ಲೋ ಇದ್ದವರನ್ನು, ಯಾವುದೋ ಭಾಷಿಗರನ್ನು, ಯಾವುದೋ ಧರ್ಮದವರನ್ನು ಒಟ್ಟುಗೂಡಿಸಿದೆ, ಒಂದಾಗಿಸುತ್ತಿದೆ ಈ ತಾಣ.

### ಏಕಾಂತ ಮತ್ತು ಲೋಕಾಂತ

ಫೇಸ್‌ಬುಕ್–ಟ್ವಿಟರ್–ಇನ್‌ಸ್ಟಾಗ್ರಾಮ್‌ನಂತಹ ಸಾಮಾಜಿಕ ಮಾಧ್ಯಮಗಳ ಮೊದಲ ಬ್ಯಾಚ್ ತಮ್ಮ ಸಂವಹನವನ್ನು ಅಂಜುತ್ತ–ಅಳುಕುತ್ತ ವೃತ್ತಿಪರತೆಗೆ ಮಾತ್ರವೇ ಬಳಸಿಕೊಂಡಿತು. ಒಂದು ಹಂತದಲ್ಲಿ ಇದು ವೈಯಕ್ತಿಕ ಮಾತುಕತೆಗಳತ್ತ ಸಾಗಿತು. ಈ ಗಡಿಯನ್ನೂ ದಾಟಿ 'ಆಪ್ತವಲಯ' ಸೃಷ್ಟಿಸಿಕೊಳ್ಳಲು ತುಸು ಸಮಯ ಹಿಡಿಯಿತು. ವ್ಯಕ್ತಿಗಳ ನೇರ ಮುಖಾಮುಖಿಗಿಂತಲೂ ಆನ್‌ಲೈನ್ ಸಂವಹನವು ಹೆಚ್ಚು ಆರಾಮದಾಯಕವೂ ಅನುಕೂಲಕರವೂ ಆಗಿ ಮುಂದುವರಿದಂತೆ ಸ್ನೇಹದ ಎಲ್ಲೆ ಮೀರಿ ಮದುವೆ, ಸಹಜೀವನಕ್ಕೂ ಮುಂದುವರಿಯಿತು ಫೇಸ್‌ಬುಕ್ ಸ್ನೇಹ.

ಮೊದಲೆಲ್ಲ ಕಾಲೇಜು–ಕಚೇರಿಗಳಲ್ಲಿ, ಅಂಗಡಿ–ಮಾರುಕಟ್ಟೆಗಳಲ್ಲಿ, ಮದುವೆ–ಸಮಾರಂಭಗಳಲ್ಲಿ, ಪ್ರವಾಸಗಳಲ್ಲಿ, ದೇವಸ್ಥಾನಗಳಲ್ಲಿ ಕಣ್ಣು ಕಣ್ಣು ಕಲೆತು, ಮನಸ್ಸು ಅರಳಿ ಪ್ರೀತಿ ಚಿಗುರೊಡೆಯುತ್ತಿತ್ತು. ಈಗೆಲ್ಲ ಹೀಗೇ ನಾಲ್ಕು ಗೋಡೆಗಳ ನಡುವೆ, ಎಲ್ಲೋ ಕುಳಿತ ಅವನು, ಹೇಗೋ ಉಳಿದ ಅವಳು, ನಾಲ್ಕಾರು ಕ್ಲಿಕ್ಕುಗಳು, ಒಂದಷ್ಟು ಲೈಕುಗಳು, ಕಮೆಂಟುಗಳು, ಶೇರ್‌ಗಳಲ್ಲಿ ಪರಿಚಯ ಸ್ನೇಹವಾಗಿ, ಸ್ನೇಹ ಮೆಚ್ಚುಗೆಯಾಗಿ, ಮೆಚ್ಚುಗೆ ಇಷ್ಟವಾಗಿ, ಇಷ್ಟ ಪ್ರೀತಿಯಾಗಿ, ಪ್ರೀತಿ ಬಾಂಧವ್ಯವಾಗುವ ಕಾಲವಿದು. ಈ ಪ್ರಕ್ರಿಯೆಗೆ ನಾಲ್ಕಾರು ದಿನಗಳಷ್ಟೇ ಆಗಬಹುದು, ನಾಲ್ಕಾರು ವರ್ಷಗಳೂ ತಗುಲಬಹುದು.

### ಕಥೆ 1: ಪ್ರತಿಮಾಲೋಕ

ಒಡಿಶಾದ ಪ್ರತಿಮಾ ದಂತವೈದ್ಯೆ. ಬೆಂಗಳೂರಿನಲ್ಲಿ ಕೊನೆಯ ಸೆಮಿಸ್ಟರ್ ಓದುವಾಗ ಸ್ನೇಹಿತನ ಸ್ನೇಹಪಟ್ಟಿಯಿಂದ ಪರಿಚಿತನಾದ ನಿಶಾಂತ್ ಜೊತೆಗೆ ಸ್ನೇಹ ಚಿಗುರಿತು. ನಿಶಾಂತ್ ಪಾಕಿಸ್ತಾನದವನು. ಗಜಲ್ ಎಂದರೆ ಅವನಿಗೆ ಪ್ರಾಣ. ತಾನು ಕೇಳುವ ಅತ್ಯುತ್ತಮ ಗಜಲ್‌ಗಳನ್ನು ಅರ್ಥವಿವರಣೆಗಳ ಸಮೇತ ಪ್ರತಿಮಾಳೊಂದಿಗೆ ಶೇರ್ ಮಾಡುತ್ತಿದ್ದ, ಚರ್ಚಿಸುತ್ತಿದ್ದ. ದುಃಖಕ್ಕೆ, ಬೇಸರಕ್ಕೆ, ಒಂಟಿತನಕ್ಕೆ, ಸಂತೋಷಕ್ಕೆ, ಸಂಭ್ರಮಕ್ಕೆ ನಿಶಾಂತ್ ಕಳಿಸುತ್ತಿದ್ದ ಗಜಲ್‌ಗಳು ಪ್ರತಿಮಾಳಿಗೆ ಸಾಂತ್ವನ–ಸಾಂಗತ್ಯ ನೀಡುತ್ತಿದ್ದವು.

ಒಂದು ದಿನ, ರಜೆಯಲ್ಲಿ ಪಾಕ್‌ಗೆ ಬರುವಂತೆ ನಿಶಾಂತ್‌ನಿಂದ ಪ್ರತಿಮಾಳಿಗೆ ಬುಲಾವ್ ಬಂತು. 90 ದಿನಗಳ ಟೂರಿಸ್ಟ್ ವೀಸಾ ಪಡೆದು ಆತ್ಮಬಂಧುವನ್ನು ಕಾಣುವ ತವಕ ಹೊತ್ತು ಪಾಕ್‌ನ ಲಯಾಲ್ಪ ಜಿಲ್ಲೆ ತಲುಪಿದಾಗ ಎಂಥದೊ ನಿರಾಳಭಾವ. ಅವನ ಅಮ್ಮ–ಅಪ್ಪ–ತಂಗಿಯ ಪುಟ್ಟ ಸಂಸಾರ, ದೊಡ್ಡ ವರಾಂಡಾ, ವಿಶಾಲ ಬಾಲ್ಕನಿ, ಪುಟ್ಟ ಗಾರ್ಡನ್ ಇರುವ ಮೂರು ಬೆಡ್‌ರೂಂ